**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ09-07-2025**

**ಪಾಟೀ ಸವಾಲುಃ ವಾದಿ ಪರ ಶ್ರೀ ಟಿ ಹೆಚ್ ಕೆ ವಕೀಲರಿಂದ**

ನನ್ನ ತಂದೆಯ ಹೆಸರು ತಿಮ್ಮೆಗೌಡ ಮತ್ತು ತಾಯಿ ಕಾಳಮ್ಮ ಎಂದರೆ ಸರಿ. ಇಬ್ಬರು ಮೃತಪಟ್ಟಿರುತ್ತಾರೆ. ನನ್ನ ತಮ್ಮನ ಹೆಸರು ಹೆಚ್.ಟಿ. ರಘು ಇರುತ್ತದೆ. ಅವರಿಗೆ ಇಬ್ಬರು ಮಕ್ಕಳು ಇರುತ್ತಾರೆ. ಸುವಿತ್ರ ನನ್ನ ಮೊದಲನೇ ಹೆಂಡತಿ ಇರುತ್ತಾರೆ. ನನ್ನ ಹೆಸರು ಹೆಚ್.ಟಿ. ರಾಜು ಅಲಿಯಾಸ್ ಪುಟ್ಟಗೌಡ ಎಂದರೆ ಸಾಕ್ಷಿ ಹೆಚ್.ಟಿ. ರಾಜು ಎಂದು ಮಾತ್ರ ಇರುತ್ತದೆ ಎಂದು ನುಡಿಯುತ್ತಾರೆ. ಧರ್ಮಶೇಖರ್ ಹೆಚ್.ಕೆ. ಎಂದರೆ ಯಾರು ಎಂದು ಗೊತ್ತಿಲ್ಲ. ಆರ್. ಕೆ. ಗಣೇಶ್ ಎಂದರೆ ಸಹ ಯಾರು ಎಂದು ಗೊತ್ತಿಲ್ಲ. ನ್ಯಾಯಾಲಯಕ್ಕೆ ಹಾಜರುಪಡಿಸಿರುವ ನನ್ನ ವಕಾಲತ್ ನಲ್ಲಿ ಮತ್ತು ನಿ.ಪಿ- 10 ರಲ್ಲಿ ಇರುವ ಸಹಿಗಳು ನನ್ನದೇ ಆಗಿರುತ್ತದೆ. ನಿ.ಪಿ-10 ರಲ್ಲಿ ಹೆಚ್.ಟಿ. ರಾಜು ಅಲಿಯಾಸ್ ಪುಟ್ಟೆಗೌಡ ಎಂದು ಸ್ಟಾಂಪ್ ಕಾಗದದಲ್ಲಿ ನಮೂದಾಗಿರುತ್ತದೆ ಎಂದರೆ ಪುಟ್ಟೆಗೌಡ ನನ್ನ ಹೆಸರು ಅಲ್ಲ ಎಂದು ನುಡಿಯುತ್ತಾರೆ. ನನ್ನ ಹೆಸರು ಪುಟ್ಟೇಗೌಡ ಆಗಿದ್ದರೂ ಸಹ ಇಲ್ಲ ಎಂದು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2014 ರಲ್ಲಿ ಅಕ್ರಮ್ ಪಾಷ ವಕೀಲರಿಂದ ವಾದಿಯರು ವಿಭಾಗಕ್ಕಾಗಿ ನನಗೆ ನೋಟೀಸ್ ಕಳುಹಿಸಿದ್ದರು ಎಂದರೆ ಸಾಕ್ಷಿ ನನಗೆ ಯಾವುದೇ ನೋಟೀಸ್ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ನಿ.ಪಿ- 9 ನೋಟೀಸ್ ನ್ನು ದಿನಾಂಕ 19.06.2014 ರಂದು ನಾನು ಖುದ್ದು ಪಡೆದು ಅಂಚೆ ಸ್ವೀಕೃತಿಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ-9 ನೋಟೀಸ್ ಪಡೆದ ನಂತರ ನಾನು ತಕ್ಷಣ ವಕೀಲರನ್ನು ಭೇಟಿ ಮಾಡಿ ನಿ.ಪಿ-10 ಒಪ್ಪಿಗೆ ಪತ್ರವನ್ನು ವಾದಿಗೆ ಬರೆದುಕೊಟ್ಟಿರುತ್ತೇನೆ ಎಂದರ ಸರಿಯಲ್ಲ. ಸಾಕ್ಷಿದಾರರ ಸಮಕ್ಷಮ ನಾನು ವಾದಿಯನ್ನು ಮಗ ಎಂದು ಒಪ್ಪಿಕೊಂಡು ದಿನಾಂಕ 10.07.2016 ರ ಒಳಗೆ 1 ಲಕ್ಷ ಹಣವನ್ನು ಹಿಸ್ಸಾ ಬಾಬ್ತು ವಾದಿಗೆ ಕೊಡುವ ಮಾತುಕತೆ ಯಾಗಿ ನಿಪಿ 10 ನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಮಾತನ್ನು ತಪ್ಪಿದ ಕಾರಣ ವಾದಿ ದಿನಾಂಕ 04.11.2019 ರಂದು ನನಗೆ ಹಿಸ್ಸೆ ಕೇಳಿ ನಿಪಿ 6 ರಂತೆ ನೋಟೀಸ್ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನೋಟೀಸ್ ನ್ನು ನನ್ನ 2 ನೇ ಹೆಂಡತಿ ಸುವಿತ್ರಾ ರವರು ನಿಪಿ 8 ರಂತೆ ಸಹಿ ಮಾಡಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಾನು ನೋಟೀಸ್ ಪಡೆದಿದ್ದರು ಸಹ ಮರು ಉತ್ತರ ನೀಡಿಲ್ಲ ಎಂದರೆ ಯಾವುದೇ ನೋಟೀಸ್ ಪಡೆದಿಲ್ಲ ಎಂದು ನುಡಿಯುತ್ತಾರೆ.

ದಾವ ಆಸ್ತಿಗಳನ್ನು ನನ್ನ ಎಲ್ಲಾ ಮಕ್ಕಳು ಸೇರಿ ಹಣ ಖರ್ಚು ಮಾಡಿ ಅಭಿವೃದ್ಧಿ ಪಡಿಸಿಕೊಂಡು ಸ್ವಾಧೀನದಲ್ಲಿ ಇರುತ್ತೇವೆ ಎಂದರೆ ಸರಿಯಲ್ಲ. ವಾದಿ ನನ್ನ ಹಿರಿಯ ಹೆಂಡತಿ ಮಗನಾಗಿರುವುದರಿಂದ ಅವರಿಗೂ ಸಹ ದಾವ ಆಸ್ತಿಯಲ್ಲಿ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ವಾದಿಗೂ ನನಗೂ ಯಾವುದೇ ಸಂಬಂಧ ಇರುವುದಿಲ್ಲ. ವಾದಿ ನನ್ನ ಮಗನಾಗಿರುವುದಿಲ್ಲ. ನಾನು ಡಿ ಎನ್ ಎ ಪರೀಕ್ಷೆಗೆ ಒಳಗಾಗಲೂ ಯಾವುದೇ ತೊಂದರೆ ಇರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

**ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**